ದಿನಾಂಕ ಃ 08.10.2021 ರಂದು ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲು ಃ ವಾದಿ ಪರ ಶ್ರೀ ಎಂ ಎನ್ ಎನ್ ವಕೀಲರಿಂದ,

ಈ ದಾವೆ ಹಾಕಿದ ನಂತರ ಪ್ರತಿ ಮುದ್ದತ್ತಿಗೂ ನನ್ನ ತಾಯಿ ನ್ಯಾಯಾಲಯಕ್ಕೆ ಬರುತ್ತಿದ್ದರು ಎಂದರೆ ಸರಿ. ಪ್ರತಿವಾದಿಗಳ ಸಾಕ್ಷಿ ವಿಚಾರಣೆಯ ಸಮಯದಲ್ಲಿ ನನ್ನ ತಾಯಿ ನನಗೆ ಜಿ.ಪಿ.ಎ ಕೊಟ್ಟಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರಿಗೆ ಸುಗರ್ ಮತ್ತು ಬಿ.ಪಿ. ಬಂದಿದೆ ಎಂದು ಹೇಳುತ್ತಾರೆ. ಈ ದಾವೆಯನ್ನು ಶರಣಮ್ಮ ಮತ್ತು ಪಂಪನಗೌಡ ಹಾಕಿರುತ್ತಾರೆ. ದಾವೆಯನ್ನು ನನ್ನ ತಾಯಿ,ಶ್ರೀದೇವಿ, ಈಶ್ವರಮ್ಮ ಮತ್ತು ಬಸವರಾಜು ಇವರ ವಿರುದ್ಧ ಹಾಕಿರುತ್ತಾರೆ. ದಾವೆ ಯಾಕೆ ಹಾಕಿರುತ್ತಾರೆ ಎಂದು ನನಗೆ ಗೊತ್ತಿದೆ. ಪ್ರತಿವಾದ ಪತ್ರವನ್ನು ಸಲ್ಲಿಸಲು ನನ್ನ ತಾಯಿ ಮಾಹಿತಿ ನೀಡಿರುತ್ತಾರೆ. ಪ್ರತಿವಾದ ಪತ್ರದಲ್ಲಿ ಏನು ಬರೆದಿರುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ವಾದಿಯರು ಈ ದಾವೆಯಲ್ಲಿ ಏನೆಲ್ಲಾ ದಾಖಲೆಗಳನ್ನು ಹಾಜರು ಪಡಿಸಿರುತ್ತಾರೆ ಎಂದು ನಾನು ನೋಡಿರುತ್ತೇನೆ. ಸಿರುಗುಪ್ಪ ನ್ಯಾಯಾಲಯದ ಮುಂದಿನ ಮುಖ್ಯರಸ್ತೆಗೆ ಹೊಂದಿಕೊಂಡು 50 ಮೀಟರ್ ವ್ಯಾಪ್ತಿಯಲ್ಲಿ ದಾವಾ ಆಸ್ತಿ ಇರುತ್ತದೆ ಎಂದರೆ ಸರಿ. 10-15 ವರ್ಷಗಳಿಂದ ನನ್ನ ತಾಯಿ ಸಿರುಗುಪ್ಪದಲ್ಲೆ ವಾಸ ಇರುತ್ತಾರೆ. ನಾನು ಸಹ ಸಿರುಗುಪ್ಪದಲ್ಲೆ ಇರುತ್ತೇನೆ. ಆಧಾರ್ ಕಾರ್ಡ್ ಮತ್ತು ಪಡಿತರ ಚೀಟಿ ಸಿರುಗುಪ್ಪ ವಿಳಾಸದಲ್ಲಿ ಇರುವುದಿಲ್ಲ. ಅದನ್ನು ಇನ್ನೂ ವರ್ಗಾವಣೆ ಮಾಡಿರುವುದಿಲ್ಲ. ನ್ಯಾಯಾಲಯದಿಂದ 50 ಮೀಟರ್ ದೂರದಲ್ಲಿರುವ ಮನೆಯಲ್ಲಿ ವಾಸ ಮಾಡುತ್ತಿರುವ ನನ್ನ ತಾಯಿಗೆ ನ್ಯಾಯಾಲಯಕ್ಕೆ ಸಾಕ್ಷಿ ಹೇಳಲು ಯಾವುದೇ ತೊಂದರೆ ಇಲ್ಲ ಎಂದರೆ ಸರಿಯಲ್ಲ.

3 ನೇ ಪ್ರತಿವಾದಿಯೂ ನನ್ನ ಅಕ್ಕ. ಅಂದರೆ ನನ್ನ ತಂದೆಯ 2 ನೇ ಹೆಂಡತಿಯ ಮಗಳು. ನನಗೂ 3 ನೇ ಪ್ರತಿವಾದಿಗೂ ಮಾತುಕತೆ ಇರುವುದಿಲ್ಲ. ಯಾವುದಾದರು ಫಂಕ್ಷನ್ ಇದ್ದರೆ ಅವರು ನಮ್ಮ ಮನೆಗೆ ಬರುತ್ತಾರೆ. ಇಲ್ಲದಿದ್ದರೆ ಬರುವುದಿಲ್ಲ. ಮನೆಯ ಗೃಹ ಪ್ರವೇಶಕ್ಕೆ 3 ನೇ ಪ್ರತಿವಾದಿ ನಮ್ಮ ಮನೆಗೆ ಬಂದಿದ್ದರು. ಸಂಪ್ರದಾಯದ ಪ್ರಕಾರ 3 ನೇ ಪ್ರತಿವಾದಿಯ ಮಗನಿಗೆ ನಾವು ಬಟ್ಟೆ ಕೊಡಿಸಬೇಕು ಆದ ಕಾರಣ ಅವರು ಬಂದಿದ್ದರು. ಆ ದಿನ 3 ನೇ ಪ್ರತಿವಾದಿಯ ಮಗನ ಜವಳಿ ಕಾರ್ಯಕ್ರಮ ನಮ್ಮ ಮನೆಯಲ್ಲಿಯೇ ನಡೆದಿತ್ತು ಎಂದರೆ ಸರಿ. ನಿಪಿ- 17 ರಂತೆ ಆ ಕಾರ್ಯಕ್ರಮದ ಆಮಂತ್ರಣ ಪತ್ರಿಕೆ ಇರುತ್ತದೆ ಎಂದರೆ ಸರಿ. 3 ನೇ ಪ್ರತಿವಾದಿಯೂ ವಾದಿಯರ ವಿರುದ್ಧ ಪ್ರಾಂಸರಿ ನೋಟ್ ಕೇಸ್ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ಓಎಸ್ ನಂ. 74/2013 ರಲ್ಲಿ ದಾವಾ ಆಸ್ತಿಯನ್ನು ಅಟ್ಯಾಚ್‌ಮೆಂಟ್ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ದಿನಾಂಕ 23.05.2013 ರಂದು ಸಿವಿಲ್ ಜಡ್ಜ್ ಅಂಡ್ ಜೆ.ಎಂ.ಎಫ್.ಸಿ ಕೊರ್ಟ್ ಸಿರುಗುಪ್ಪ, ದಾವಾ ಆಸ್ತಿಯನ್ನು ಅಟ್ಯಾಚ್‌ಮೆಂಟ್ ಮಾಡಿ ಆದೇಶ ಒದಗಿಸಿರುತ್ತದೆ ಎಂದರೆ ಗೊತ್ತಿಲ್ಲ. ದಾವೆ ಚಾಲ್ತಿಯಲ್ಲಿರುವಾಗ ದಿನಾಂಕ 14.08.2013 ರಂದು ದಾವಾ ಆಸ್ತಿಯನ್ನು ನನ್ನ ತಾಯಿ 1 ನೇ ಪ್ರತಿವಾದಿಯಿಂದ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ನ್ಯಾಯಾಲಯದಲ್ಲಿ ಅಟ್ಯಾಚ್‌ಮೆಂಟ್ ಮಾಡಿರುವ ವಿಷಯವನ್ನು 3 ನೇ ಪ್ರತಿವಾದಿಯೂ ನಮಗೆ ತಿಳಿಸಿದ್ದರೂ ಸಹ ನಾವು ಆಸ್ತಿಯನ್ನು ಖರೀದಿ ಮಾಡಿದ್ದೇವೆ ಎಂದರೆ ಸರಿಯಲ್ಲ.

ವಾದಿಯರು ಈ ದಾವೆಯಲ್ಲಿ ಹಾಜರು ಪಡಿಸಿದ ದಾಖಲೆಗಳನ್ನು ನಾನು ನೋಡಿರುತ್ತೇನೆ. 1 ನೇ ಪ್ರತಿವಾದಿಯೂ ದಾವಾ ಆಸ್ತಿಯನ್ನು 1 ನೇ ವಾದಿಯಿಂದ ಖರೀದಿ

ಮಾಡಿರುತ್ತಾರೆ ಎಂದು ನನಗೆ ಗೊತ್ತಿದೆ. 1 ನೇ ಪ್ರತಿವಾದಿಯ ಖರೀದಿ ಪತ್ರವನ್ನು ನಾನು ನೋಡಿರುತ್ತೇನೆ. ದಿನಾಂಕ 27.04.2013 ರ ಕ್ರಯ ಪತ್ರವನ್ನು ನಾನು ನೋಡಿರುತ್ತೇನೆ, ಅದರಲ್ಲಿ ದಾವಾ ಆಸ್ತಿಯೂ ಖಾಲಿ ಜಾಗ ಎಂದು ನಮೂದು ಇತ್ತು. ವಾದಿಯರು 1 ನೇ ಪ್ರತಿವಾದಿಗೆ ಬರೆದುಕೊಟ್ಟ ಖರೀದಿ ಪತ್ರ ಆಗುವಾಗ ನನ್ನ ತಾಯಿ, ಪ್ರತಿವಾದಿ ನಂಬರ್ 3 ಮತ್ತು 4 ನೊಂದಣಿ ಕಛೇರಿಯಲ್ಲಿ ಇದ್ದರು ಎಂದರೆ ಸರಿಯಲ್ಲ. ಖರೀದಿ ಪತ್ರ ಆಗುವ ಕಾಲಕ್ಕೆ ದಾವಾ ಆಸ್ತಿಯಲ್ಲಿ ಮನೆ ಕಟ್ಟಡ ಇತ್ತು ಎಂದರೆ ಸರಿಯಲ್ಲ. ದಿನಾಂಕ 14.08.2013 ರಂದು ನನ್ನ ತಾಯಿ 1 ನೇ ಪ್ರತಿವಾದಿಯಿಂದ ದಾವಾ ಆಸ್ತಿಗೆ ಸಂಬಂಧಿಸಿದ ಖರೀದಿ ಪತ್ರ ಮಾಡಿಸಿಕೊಂಡಿದ್ದಾರೆ ಎಂದರೆ ಸರಿ. ನನ್ನ ತಾಯಿ ಖರೀದಿ ಮಾಡುವಾಗ ದಾವಾ ಆಸ್ತಿಯಲ್ಲಿ ಮನೆ ಇತ್ತು. ಇವಾಗ ಸಾಕ್ಷಿಗೆ ನಿಪಿ-6 ಛಾಯ ಚಿತ್ರವನ್ನು ತೋರಿಸಿದ್ದು ಸದರಿ ಮನೆಯನ್ನು ನಾವು ಕಟ್ಟಿಸಿರುತ್ತೇವೆ ಎಂದು ಸಾಕ್ಷಿ ಹೇಳುತ್ತಾರೆ. ವಾದಿಯರು ದಾವಾ ಆಸ್ತಿಯಲ್ಲಿ ಮನೆ ಕಟ್ಟುವ ಕಾಲಕ್ಕೆ ನಿಪಿ-7 ರಂತೆ ಫೋಟೊ ತೆಗೆಸಿರುತ್ತಾರೆ ಎಂದರೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿರುವ ಮನೆಯನ್ನು ವಾದಿಯರೇ ಕಟ್ಟಿಸಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಮನೆ ಕಟ್ಟಲು 40 ಲಕ್ಷ ರೂ. ಖರ್ಚಾಗಿರುತ್ತದೆ. 40 ಲಕ್ಷ ಬೆಲೆ ಬಾಳುವ ಮನೆಯನ್ನು ನನ್ನ ತಾಯಿ ಕೇವಲ 7 ಲಕ್ಷಕ್ಕೆ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು 6 ನೇ ತರಗತಿ ಓದಿರುತ್ತೇನೆ. ಮನೆ ಕಟ್ಟಬೇಕಾದರೆ ಮುನ್ಸಿಪಾಲ್ಟಿಯಿಂದ ಪರವಾನಗೆ ಪಡೆದುಕೊಳ್ಳಬೇಕು ಎಂದು ನನಗೆ ಗೊತ್ತಿದೆ. ಕಟ್ಟಡ ಕಟ್ಟಲು ನಾವು ಪರವಾನಗೆಯನ್ನು ಪಡೆದುಕೊಂಡಿದ್ದೇವೆ. ಕಟ್ಟಡ ಕಟ್ಟಲು ನೀಡಿದ ಪರವಾನಗೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ನಾನು ಕಟ್ಟಡ ಕಟ್ಟಲು

ಯಾವುದೇ ಪರವಾನಗೆಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸಾಕ್ಷಿ ಯಾವುದೇ ಉತ್ತರ ನೀಡಿರುವುದಿಲ್ಲ. ವಾದಿಯೂ ದಾವಾ ಆಸ್ತಿಯಲ್ಲಿ ಕಟ್ಟಡ ಕಟ್ಟಲು ನಿಪಿ-1 ಮತ್ತು 2 ರಂತೆ ಪರವಾನಗೆ ತೆಗೆದುಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-1 ರಲ್ಲಿ ತೋರಿಸಿದ ನಕ್ಷೆಯ ಪ್ರಕಾರ ವಾದಿಯರು ಮನೆ ಕಟ್ಟಿರುತ್ತಾರೆ ಎಂದರೆ ಸಾಕ್ಷಿ ಯಾವುದೇ ಉತ್ತರ ನೀಡಿರುವುದಿಲ್ಲ. ವಾದಿಯರು ದಾವಾ ಆಸ್ತಿಯಲ್ಲಿರುವ ಕಟ್ಟಡವನ್ನು ಇಂಜಿನಿಯರ್ ಮುಖಾಂತರ ಅಳತೆ ಮಾಡಿಸಿ ಅದರ ಮೌಲ್ಯ-ಮಾಪನ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತಾರೆ ಎಂದರೆ ಗೊತ್ತಿಲ್ಲ. ವಾದಿಗೆ 2013 ರಲ್ಲಿ ಮನೆ ಕಟ್ಟಲು ಹಣದ ಅಡಚಣೆ ಬಂದಿರುವುದರಿಂದ ಪ್ರತಿವಾದಿ 1 ಮತ್ತು 4 ರವರಿಂದ 1,80,000-/ ರೂ. ಸಾಲ ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ಸದರಿ ಸಾಲದ ಭದ್ರತೆಗಾಗಿ ಪ್ರತಿವಾದಿ 1 ಮತ್ತು 4 ರವರು ವಾದಿಯವರಿಂದ ಖಾಲಿ ಪ್ರಾಂಸರಿನೋಟ್‌ನ ಮೇಲೆ ಸಹಿ, ಸಹಿ ಮಾಡಿದ ಖಾಲಿ ಚೆಕ್‌ಗಳು ಮತ್ತು ಮೊಸದಿಂದ ಖರೀದಿ ಪತ್ರವನ್ನು ಮಾಡಿಸಿಕೊಂಡಿದ್ದು ಅದಕ್ಕೆ ನಾನು ನನ್ನ ತಾಯಿ ಮತ್ತು ನನ್ನ ಅಕ್ಕ ಎಲ್ಲರೂ ಸಹಾಕಾರ ನೀಡಿರುತ್ತೇವೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಯೂ ಸಾಲ ಮರುಪಾವತಿ ಮಾಡಿರುತ್ತಾರೆ ಎಂದು ವಾದಿಗೆ ನಿಪಿ-26 ರಂತೆ ರಸೀದಿ ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿರುವ ಮನೆಯನ್ನು ಮೋಸದಿಂದ ಪಡೆದುಕೊಳ್ಳಬೇಕು ಎನ್ನುವ ಉದ್ದೇಶದಿಂದ ಎರಡು ಸುಳ್ಳು ಖರೀದಿ ಪತ್ರವನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಖಾಲಿ ಪ್ರಾಂಸರಿ ನೋಟ್ ನ್ನು ದುರಪಯೋಗ ಪಡಿಸಿಕೊಂಡು 4 ನೇ ಪ್ರತಿವಾದಿಯೂ 3 ನೇ ಪ್ರತಿವಾದಿಯ ಮೂಲಕ ವಾದಿಯರ ವಿರುದ್ಧ

ಸುಳ್ಳು ದಾವೆ ಹಾಕಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಅಕ್ಕ ಸಲ್ಲಿಸಿದ ಪ್ರಾಂಸರಿ ನೋಟ್ ಕೇಸ್ ಇನ್ನೂ ಚಾಲ್ತಿಯಲ್ಲಿದೆ ಎಂದರೆ ಗೊತ್ತಿಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಆಲಿಸಿ, ಮುಂದೂಡಲಾಯಿತು.)

( ನನ್ನ ಹೇಳಿಕೆಯಂತೆ ಮುಕ್ತನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ,

ಸೀನಿಯರ್ ಸಿವಿಲ್ ನ್ಯಾಯಾಧೀಶರು, ಸಿರುಗುಪ್ಪ.